ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ವಸತಿನಿಲಯ

**ಕೊಳ್ಳೇಗಾಲ - 571 440, ಚಾಮರಾಜನಗರ ಜಿಲ್ಲೆ**

☎: 08224-256625 Email: jsscwk@gmail.com www.jsscwkgl.org

ದಿನಾಂಕ:11.3.2025 ರಂದು ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲದಲ್ಲಿ ಯೂತ್ ರೆಡ್ ಕ್ರಾಸ್ ಘಟಕದ ವತಿಯಿಂದ **"ಹದಿಹರೆಯದವರ ಶಿಕ್ಷಣ"** ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಹದಿಹರೆಯದ ಹೆಣ್ಣು ಮಕ್ಕಳು ಅತ್ಯುತ್ತಮವಾದ ಜೀವನ ಶೈಲಿಯನ್ನು ರೂಡಿಸಿಕೊಂಡು ಕೆಲವು ವ್ಯಾಯಮಗಳನ್ನು ಮಾಡುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಹಾಗೂ ನಮ್ಮ ಸುತ್ತಮುತ್ತ ಇರುವ ಪರಿಪರವನ್ನು ಸ್ವಚ್ಛವಾಗಿಡಬೇಕೆಂದು ಕೊಳ್ಳೇಗಾಲದ ಉಪವಿಭಾಗ ಆಸ್ಪತ್ರೆಯ ಡಾ.ಶೃತಿ ಜಿ.ಯು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ನೀಡಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಡಿ.ಎ.ಪಿ.ಸಿ.ಯು ವಿಭಾಗ ಜಿಲ್ಲಾ ಮೇಲ್ವಿಚಾರಕರಾದ ಶ್ರೀ ಮಹದೇವಪ್ರಸಾದ್ ಎನ್.ಜಿ ಅವರು ಪ್ರತಿಯೊಬ್ಬರು ರಕ್ತದಾನವನ್ನು ಮಾಡುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡುವುದರ ಮೂಲಕ ಒಬ್ಬರ ಜೀವಕ್ಕೆ ನೆರವಾಗಬೇಕೆಂದು ತಿಳಿಸಿದರು.

ಐ.ಸಿ.ಐ.ಸಿ ವಿಭಾಗದ ಆಪ್ತ ಸಮಲೋಚಕರಾದ ಶ್ರೀ ಶಶಿಕಾಂತ್ ಅವರು ಮಾತನಾಡಿ ಯುವಕರು ಆರೋಗ್ಯವಾಗಿದ್ದರೆ ಮಾತ್ರ ನಮ್ಮ ದೇಶ ಸದೃಢವಾಗಿರುವುದಕ್ಕೆ ಸಾಧ್ಯ. ಯುವಶಕ್ತಿಯೇ ದೇಶದ ಆಸ್ತಿ ಎಂದು ತಿಳಿಸುವ ಮೂಲಕ ಎಚ್.ಐ.ವಿ.ಯ ಬಗ್ಗೆ ಅರಿವು ಮೂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಡಾ.ಹೆಚ್.ಎಸ್.ಕೊಂಗಳಪ್ಪರವರು ಜೀವನದಲ್ಲಿ ಒಳ್ಳೆಯ ಸಾಧನೆಗಳನ್ನು ಮಾಡುವ ಮೂಲಕ ಒಳ್ಳೆಯ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಸರ್ವರೋಗಕ್ಕೂ ನಗುವೇ ಔಷದ ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಪುಟ್ಟಮ್ಮ ಉಪಸ್ಥಿತರಿದ್ದರು.

ವಿಶೇಷ ಉಪನ್ಯಾಸ ಕಾರ್ಯಕ್ರಮ  ಉದ್ಘಾಟಿಸುತ್ತಿರುವುದು ಚಿತ್ರದಲ್ಲಿ ಶ್ರೀ.ಶ್ರೀಕಾಂತ, ಆಪ್ತಸಮಲೋಚಕರು, ಶ್ರೀ ಶಶಿಕಾಂತ, ಆಪ್ತಸಮಲೋಚಕರು, ಶ್ರೀ ಮಹದೇವಪ್ರಸಾದ್ ಎನ್.ಜಿ, ಜಿಲ್ಲಾ ಮೇಲ್ವಿಚಾರಕರು, ಪ್ರಾಚಾರ್ಯರಾದ ಡಾ. ಹೆಚ್ ಎಸ್ ಕೊಂಗಳಪ್ಪ, ಕೊಳ್ಳೇಗಾಲದ ಉಪವಿಭಾಗ ಆಸ್ಪತ್ರೆಯ ಡಾ.ಶೃತಿ ಜಿ.ಯು ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಪುಟ್ಟಮ್ಮ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತ.

